ನಂ. 9. ತಾರೀಖು 2ನೇ ಸೆಪ್ಟಬಂರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪೆಲ್ ರೆಗ್ಯುಲೇಷ್ನ 5ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ಇದರಡಿ ಕಂಡವರು ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನ ಹಿಂದೂ ತರಗತಿಯ ವಾಸಸ್ಥರಿಂದ ಸದರೀ ಸ್ಟೇಷನಿನ ಮ್ಯುನಿಸಿಪೆಲ್ ಕಮ್ಮಿಷನರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ :-

1. ರಾಯಬಹದೂರ್ ಯಂ. ಆರ್. ಸಭಾಪತಿ ಮೊದಲಿಯಾರ್
2. ವಿ. ಗಂಗಾಧರಚಟ್ಟಿಯಾರ್
3. ಯಂ. ಗೋವಿಂದರಾಜವೊದೆಲಿಯಾರ್
4. ಯಂ. ಚೊಕ್ಕಲಿಂಗವೊದಲಿಯಾರ್

} ಹಿಂದೂ ತರಗತಿಯ ಪ್ರತಿನಿಧಿಗಳಾಗಿ.

2. ಇವರುಗಳು ಚುನಾಯಿಸಲ್ಪಟ್ಟ ತಾರೀಖು ಮೊದಲು 2 ವರುಷದ ಕಾಲದವರಿಗೂ ಅಥವಾ ಅವರ ಬದಲಿ ಮೊಕರರ್ರಾ ಡಲ್ಪಡುವವರಿಗೂ ಉದ್ಯೋಗದಲ್ಲಿ ಇರತಕ್ಕದ್ದು.

ಜೆ. ಬಿ. ಬಿ. ಬೋಜೀಬ್,
ಹೆಚ್. ವೈಲಿ, ಮೇಜರ್,
ರೆಸಿಡೆಂಟರ ಅಸಿಸ್ಟೆಂಟ್.

ಜುಡಿಷಿಯಲ್ ಇಲಾಖೆ.

ಇನ್ಸಿಹಾರ್‌ನಾಮೆ.

ತಾರೀಖು 15ನೇ ಸೆಪ್ಟಂಬರ್ 1884.

ಶ್ರೀಮ್ ಮಹಾರಾಜಾ ಸರ್ಕಾರದವರ ಆಜ್ಞಾನುಸಾರವಾಗಿ ಚೀಫ್ ಕೋರ್ಟ್‌ನವರು ನಿಯಮಿಸುವದೇನಂದರೆ, ಮೈಸೂರು ಬೇಸದ ತಮಾಂ ಸಿವಿಲ್ ಕೋರ್ಟುಗಳೂ 1884ನೇ ಇಸವಿ ಸೆಪ್ಟಂಬರ್ 25ನೇ ತಾರೀಖು ಮೊದಲು 2ನೇ ಅಕ್ಟೋಬರ್ ವರಿಗೆ ದಸರಾ ಹಬ್ಬಕ್ಕೋಸ್ಕರ ಬರಖಾಸ್ತು ಮಾಡಲ್ಪಡತಕ್ಕದ್ದು.

ಎಸ್. ಹೇಮಾಜೀರಾವ್,
ರಿಜಿಸ್ಟ್ರಾರ್.

ಫಿನಾನ್ಷಿಯಲ್ ಇಲಾಖೆ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫ್ಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫ್ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಟ್ರೋಲರ್.